ಜಿಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ

**ಸಿ.ಸಿ.ನಂ.2415/2022**

**ಫಿರ್ಯಾದಿದಾರ :** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು :**
1. ಸಂಜು @ ಸಂಜಯ ಮೋಹನ ರಾಠೋಡ
2. ಅನಸುಬಾಯಿ ಮೋಹನ ರಾಠೋಡ

- - -

**ದೋಷಾರೋಪಣೆ**

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಸಂಜು @ ಸಂಜಯ ಮೋಹನ ರಾಠೋಡ
2. ಅನಸುಬಾಯಿ ಮೋಹನ ರಾಠೋಡ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ :**

ದಿನಾಂಕ 02-11-2021 ರಂದು ಸಂಜೆ 04.00 ಗಂಟೆಗೆ ಆರೋಪಿತರಾದ ನೀವು ಏಕೊದ್ದೇಶ ಈಡೆರಿಸುವ ಸಲುವಾಗಿ ಚಾ ಸಾ 1 ಮತ್ತು 2 ರವರ ಹೊಲಕ್ಕೆ ಹೋಗಿ ತಮ್ಮ ಹೊಲದ ಒಡ್ಡಿಗೆ ಹೋರಿಯನ್ನು ಕಟ್ಟಿ ಹೊಲದಲ್ಲಿ ಕೆಲಸ ಮಾಡುವ ಸಮಯದಲ್ಲಿ 2 ನೇ ಆರೋಪಿ ಸ್ವ ಇಚ್ಚೆಯಿಂದ ಚಾ ಸಾ 2 ರವರ ಕಪಾಳಕ್ಕೆ ಹೊಡೆದಿದ್ದು ಅಲ್ಲದೇ 1 ನೇ ಆರೋಪಿ ಸ್ವ ಇಚ್ಚೆಯಿಂದ ಚಾ ಸಾ 2 ರವರ ಹೊಟ್ಟೆಗೆ ಎದೆಗೆ ಮುಖಕ್ಕೆ ಗುದ್ದಿದ್ದು, ಮುಂಗೈ ಬೆನ್ನಿನ ಮೇಲೆ ಹೊಡೆದಿದ್ದು ಅಲ್ಲದೇ ಚಾ ಸಾ 1 ರವರು ಬಿಡಿಸಿಕೊಳ್ಳಲು ಬಂದಾಗ ಆತನಿಗೆ ಸಹ 1 ನೇ ಆರೋಪಿ ಸ್ವ ಇಚ್ಚೆಯಿಂದ ಎದೆಯ ಮೇಲಲಿನ ಅಂಗಿ ಹಿಡಿದು ಮುಖಕ್ಕೆ ಕೈಯಿಂದ ಗುದ್ದಿ ಕಾಲಿನಿಂದ ಒದ್ದು ಸಾದಾ ಸ್ವರೂಪದ ಗಾಯ ಉಂಟುಪಡಿಸಿದ್ದರಿಂದ ಭಾ.ದಂ.ಸಂ.ಕಲಂ.323 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಏಕೊದ್ದೇಶ ಈಡೆರಿಸುವ ನಿಮ್ಮ ಪೈಕಿ 1 ನೇ ಆರೋಪಿ ಚಾ ಸಾ 2 ರವರ ಕೆಳಗೆ ಬಿದ್ದಾಗ ತಲೆ ಜುಟ್ಟು ಹಿಡಿದು ದರದರನೆ ಎಳೆದು ಸ್ತ್ರೀ ಮರ್ಯಾದೆಗೆ ಅಪಮಾನ ಮಾಡಿ ಮಾನ ಹಾನಿಪಡಿಸಿದ್ದರಿಂದ ಆ ಮೂಲಕ ನೀವು ಭಾ.ದಂ.ಸಂ.ಕಲಂ.354 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಏಕೋದ್ದೇಶ ಈಡೇರಿಸುವ ಸಲುವಾಗಿ ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿತರು ಚಾ ಸಾ 1 ಮತ್ತು 2 ರವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಬಂದು, 1 ನೇ ಆರೋಪಿ ಚಾ ಸಾ 1 ರವರಿಗೆ ಯಾಕೋ ರಂಡಿ ಮಗನ್ಯಾ, ಎಷ್ಟು ಸಲ ಹೇಳಬೇಕ್ ನಿನಗ ಇಲ್ಲಿ ದನ ಕರಗಳು ಕಟ್ಟಬ್ಯಾಡ ಈ ಎಡ್ಡು ನಮ್ಮದು ಅಂತಾ ಅವಾಚ್ಯ ಶಬ್ದಗಳಿಂದ ಬೈದು ಮನಸ್ಸಿನ ಶಾಂತಿ ಭಂಗಪಡಿಸಿ ಅಪರಾಧಿಕ ಪ್ರಚೋದನೆ ಉಂಟುಪಡಿಸಿದ್ದರಿಂದ ಭಾ.ದಂ.ಸಂ.ಕಲಂ.504 ಸಹ ಕಲಂ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ :27-12-2022

ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಸಿಂದಗಿ

## ಆಪಾದಿತರ ಹೇಳಿಕೆ

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

1

2

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರಾ?

ಉತ್ತರ ಃ

1

2

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,
ದಿನಾಂಕಃ27-12-2022

ಜೆ. ಎಮ್. ಎಫ್.ಸಿ., ಸಿಂದಗಿ

ಆಪಾದಿತರ ಸಹಿ